ಸಾಕ್ಷಿಯನ್ನು ದಿನಾಂಕ 19.06.2026 ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು.

ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

33) ಜರೀನಾ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿ ಅಲ್ಲ ಎಂದರೆ ಸರಿ. ಜರೀನಾಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಮೃತ ವ್ಯಕ್ತಿ ಹಾಗು ಆತನ ಹೆಂಡತಿಯ ನಡುವೆ ವ್ಯಾಜಗಳು ಇದ್ದವು ಎಂದರೆ ಸರಿ. ಇಬ್ಬರು ಸಹ ಬೇರೆ ಬೇರೆ ಊರಿನಲ್ಲಿ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ. ಅವರಿಬ್ಬರ ನಡುವೆ ಕೌಟುಂಬಿಕ ನ್ಯಾಯಾಲಯದಲ್ಲಿ ಕೇಸುಗಳು ಇದ್ದವು ಎಂದರೆ ಸರಿ. ವರದಕ್ಷಿಣೆ ಕಿರುಕುಳದ ಪ್ರಕರಣ, ಕೌಟುಂಬಿಕ ದೌರ್ಜನ್ಯದ ಪ್ರಕರಣಗಳು ಸಹ ಅವರಿಬ್ಬರ ನಡುವೆ ಇದ್ದವು ಎಂದರೆ ಸರಿ.

34) ಆರೋಪಿಯು ಮೃತ ಜಾಫರ್ ನನ್ನು ಕೂಡ್ಲಿಗಿಯ ಹಿರೆಹೆಗ್ಡಾಳ್ ಗ್ರಾಮದಲ್ಲಿ ಕೋಡಿ ಬಸವೇಶ್ವರ ದೇವಸ್ಥಾನದಲ್ಲಿ ದಿನಾಂಕ 27.04.2016 ರಂದು ಮದುವೆಯಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಯು ಮದುವೆ ಆಗಿದೆ ಎಂಬುದು ಮಾತ್ರ ಗೊತ್ತಿದೆ ಎಂದು ಹೇಳುತ್ತಾರೆ. ಆರೋಪಿ ಮತ್ತು ಮೃತನಿಗೆ ನಿಕಿಲ್ ಸಾಯಿ ಎಂಬ ಮಗನಿದ್ದಾನೆ ಎಂದರೆ ಸರಿ. ಈ ಪ್ರಕರಣದ ಎಫ್.ಐ.ಆರ್ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು ಎಂದರೆ ಸರಿ. ಮೃತನ ಮೊದಲನೇ ಹೆಂಡತಿ ಜೀವಂತ ಇದ್ದಾಳೆ ಎಂದರೆ ಸರಿ. ಅವಳು ನಮ್ಮ ಠಾಣೆಗೆ ಬಂದು ತನ್ನ ಗಂಡನ ಕೊಲೆ ಬಗ್ಗೆ ದೂರನ್ನು ಕೊಟ್ಟಿಲ್ಲ ಎಂದರೆ ಸರಿ. ಮೃತ ಜಾಫರ್ ಸೈಕಲ್ ಖರೀದಿ ಮಾಡಿದ ಬಗ್ಗೆ ರಶೀದಿಯನ್ನು ಮತ್ತು ಮೃತನು ತನ್ನ ಮೊದಲನೇ ಹೆಂಡತಿ ಮಗನಿಗೆ ಕೊಟ್ಟಿದ್ದ ಎಂದು ಹೇಳಿದ ಸೈಕಲನ್ನು ಜಪ್ತು ಮಾಡಿಕೊಂಡಿಲ್ಲ.

35) ದಿನಾಂಕ 22.03.2023 ರಂದು ಮೃತ ಜಾಫರ್ ಬಳ್ಳಾರಿಯ ಕೇಂದ್ರ ಕಛೇರಿಯಲ್ಲಿ ಇದ್ದ ಬಗ್ಗೆ ಮಾಹಿತಿ ಇತ್ತು. ಒಬ್ಬ ಪೊಲೀಸ್ ಅಧಿಕಾರಿ ಅಥವಾ ಪೊಲೀಸ್ ಕೇಂದ್ರ ಸ್ಥಾನವನ್ನು ಬಿಡಲು ಮೇಲಾಧಿಕಾರಿಗಳ ಅನುಮತಿ ಪಡೆಯಬೇಕು ಎಂದರೆ ಸರಿ. ನಾನು ಜರೀನಾ ರವರ ಮೊಬೈಲ್ ನಂಬರನ್ನು ತಿಳಿದುಕೊಂಡಿಲ್ಲ ಮತ್ತು ಅವಳ ಮೊಬೈಲ್ ಪೋನನ್ನು ಜಪ್ತು ಮಾಡಿಕೊಂಡಿಲ್ಲ. ನಾನು ಜರೀನಾರವರ ಮೊಬೈಲ್ ಕಾಲ್ ಡಿಟೇಲ್ಸ ಪಡೆದುಕೊಂಡಿಲ್ಲ. ನಾನು ಬಾಷಾರವರ ಮೊಬೈಲನ ಕಾಲ್ ಡಿಟೇಲ್ಸ್ ಪಡೆದಿಲ್ಲ.

**36)** ಪೊಲೀಸ್ ವಸತಿ ಗೃಹದಲ್ಲಿ ಅನೈತಿಕ ಚಟುವಟಿಕಗಳು ನಡೆಯುವುದಿಲ್ಲ ಎಂದರೆ ಸರಿ. ಮೃತ ವಾಸವಿದ್ದ ವಸತಿ ಗೃಹದ ಸುತ್ತಮುತ್ತಲು ಬೇರೆಯವರ ವಸತಿ ಗೃಹಗಳು ಇವೆ ಎಂದರೆ ಸರಿ. ಸದರಿ ವಸತಿ ಗೃಹಗಳ ಯಾರು ಸಹ ಪೊಲೀಸರಿಗೆ ಮೃತನ ಕೊಲೆ ಬಗ್ಗೆ ದೂರು ಕೊಟ್ಟಿಲ್ಲ.

**37)** ಚಾಸಾ-**6, 11** ಮತ್ತು **31** ರವರುಗಳ ಕಾಲ್ ಡಿಟೇಲ್ಸ್ ಗಳನ್ನು ನಾನು ಪಡೆದಿಲ್ಲ. ನಿಪಿ-**74** ರಲ್ಲಿ ಚಾಸಾ-**6, 11** ಮತ್ತು **31** ರವರ ಮೊಬೈಲ್ ನಂಬರುಗಳು ಯಾವವು ಎಂದು ಪ್ರತ್ಯೇಕವಾಗಿ ಗುರುತು ಮಾಡಿಲ್ಲ. ಪೊಲೀಸ್ ವಸತಿ ಗೃಹ ಎಸ್.ಎನ್ ಪೇಟೆಯಲ್ಲಿ ಇದೆ ಎಂದರೆ ಸರಿ. ವುಮೆನ್ಸ ಕಾಲೇಜ್ ಬೇರೆ ಏರಿಯಾದಲ್ಲಿ ಬರುತ್ತದೆ ಎಂದರೆ ಸರಿ. ಎಸ್.ಎನ್ ಪೇಟೆ ವಸತಿ ಗೃಹ ಲೊಕೇಶನ್ ಟವರ್ ಶೆಟ್ಟಿ ಕಂಪೌಂಡನಲ್ಲಿ ಬರುತ್ತದೆ ಮತ್ತು ಗಾಂಧಿನಗರ ವುಮೆನ್ಸ್ ಕಾಲೇಜ್‌ದ ಟವರ್ ಲೊಕೇಶನ್ ಬೇರೆ ಕಡೆ ಬರುತ್ತದೆ ಎಂದರೆ ಸರಿಯಲ್ಲ.

**38)** ಮೊಬೈಲ್ ಸಂಖ್ಯೆ **8951053771** ರ ಸಿಮ್ ಕಾರ್ಡ ವಶಪಡಿಸಿಕೊಂಡಿದ್ದೆ. ನಿಪಿ-**30** ರಲ್ಲಿ ಘಟನೆ ದಿವಸ ಆರೋಪಿ ಮೊಬೈಲನಿಂದ ಎಷ್ಟು ಕಾಲ್ ಮಾಡಿದ್ದರು ಎಂಬುದರ ಬಗ್ಗೆ ನಮೂದಿಸಿಲ್ಲ. ನಿಪಿ-**30** ರಲ್ಲಿ ಸಿಮ್ ಕಾರ್ಡನ್ನು ಜಪ್ತು ಮಾಡಿಕೊಂಡ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು ಮೊಬೈಲ್ ಜೂತೆ ಸಿಮ್‌ಕಾರ್ಡ ಜಪ್ತು ಮಾಡಿಕೊಂಡಿದ್ದೆ ಎಂದು ಹೇಳುತ್ತಾರೆ. ಮೊಬೈಲ್ ಜೊತೆ ಸಿಮ್‌ಕಾರ್ಡ ಇತ್ತು ಎಂದು ಪಂಚನಾಮೆಯಲ್ಲಿ ಪ್ರತ್ಯೇಕವಾಗಿ ಬರೆದಿಲ್ಲ ಎಂದರೆ ಸರಿ. ನಿಪಿ-**30** ರಲ್ಲಿ ನಮೂದು ಮಾಡಿರುವ ಐ.ಎಮ್.ಇ.ಐ ನಂಬರ್ **860389041666773** ಎಂದರೆ ಸರಿ. ನಿಪಿ-**74** ರಲ್ಲಿ ನಮೂದು ಮಾಡಿರುವ ಐ.ಎಮ್.ಇ.ಐ ನಂಬರ್ **860389041666780** ಎಂದರೆ ಸರಿ. ಎರಡು ಐ.ಎಮ್.ಇ.ಐ ನಂಬರುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಎರಡು ಐ.ಎಮ್.ಇ.ಐ ನಂಬರ್ ಗಳು ಒಂದೇ ಎಂದು ತೋರಿಸಲು ಸಂಬಂಧಪಟ್ಟ ಮೊಬೈಲ್ ಕಂಪನಿಯ ಅಧಿಕಾರಿಗಳ ಹೇಳಿಕೆ ಪಡೆದಿಲ್ಲ. ನಾನು ಮಾಡಿರುವ ಲೋಪವನ್ನು ಮುಚ್ಚಿಕೊಳ್ಳಲು ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**39)** ಮೃತನ ಹೆಂಡತಿ ನವೀನ್ ತಾಜ್ ಕಂಪ್ಲಿ ಪೊ.ಠಾಣೆಗೆ ಭೇಟಿ ನೀಡಿದ ಬಗ್ಗೆ ಠಾಣೆಯ ಸಿಸಿ ಟೀವಿ ಪೂಟೇಜ್ ಆಗಲಿ ಅಥವಾ ಠಾಣೆಯ ವಿಜಿಟರ್ ಪುಸ್ತಕವನ್ನಾಗಲಿ ನಾನು ಪಡೆದಿಲ್ಲ. ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ಪಿಂಗರ್ ಪ್ರಿಂಟ್ಸ್ ಮತ್ತು ಫೂಟ್ ಪ್ರಿಂಟ್ಸ್ ಪಡೆದಿಲ್ಲ. ಹಾರೆಯ ಮೇಲೆ ಫಿಂಗರ್ ಪ್ರಿಂಟ್ ಸಿಕ್ಕಿರುವುದಿಲ್ಲ. ಸಾಕ್ಷಿಯು ಹಾರೆ ರಫ್ ಸರ್ಪೇಸ್‌ನದು ಆಗಿರುವುದರಿಂದ ಫಿಂಗರ್ ಪ್ರಿಂಟ್ ಸಿಗುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿಯು ಆ ದಿವಸ ಪೊಲೀಸ್ ವಸತಿ ಗೃಹದಲ್ಲಿ ಇದ್ದ ಬಗ್ಗೆ ಸಿಸಿ ಟೀವಿ ಫೂಟೇಜ್ ಪಡೆದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಸತಿ ಗೃಹದಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿಲ್ಲ ಎಂದು ಹೇಳಿರುತ್ತಾರೆ.

**40)** ಡಿ.ಎ.ಎರ್ ವಸತಿ ಗೃಹ ಮತ್ತು ಡಿ.ಎ.ಆರ್ ಕೇಂದ್ರ ಕಛೇರಿ ಒಂದೇ ಕಡೆ ಇರುವುದರಿಂದ ಅಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿರುವ ಹೊನ್ನೂರು ಸ್ವಾಮಿಯ ಮಗಳು ನಬೀನಾ ಯಾರು ಎಂಬುದರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಚಾಸಾ-**9** ಘಟನೆ ಬಗ್ಗೆ ದೂರನ್ನು ಸಲ್ಲಿಸಿಲ್ಲ. ನವೀನ್ ತಾಜ್‌ರವರ ಮಕ್ಕಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಮೃತನು ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾನೆ ಎಂದರೆ ಸರಿ. ನಿಪಿ-**4** ಮತ್ತು **5** ಭಾವಚಿತ್ರಗಳಲ್ಲಿ ಬಾಗಿಲಿಗೆ ತೋರಣ ಕಟ್ಟಿರುವುದು ಕಂಡು ಬರುತ್ತದೆ ಎಂದರೆ ಸರಿ. ಹಿಂದುಗಳು ಕಟ್ಟುವ ತಾಳಿಯ ಮಾದರಿ ಹಾಗು ಮುಸ್ಲಿಂರು ಕಟ್ಟುವ ತಾಳಿಯ ಮಾದರಿ ಬೇರೆ ಬೇರೆ ಎಂದರೆ ಸರಿ. ಆರೋಪಿಯು ಸದರಿ ತಾಳಿ ತನ್ನದು ಎಂದು ಹೇಳಿರುತ್ತಾಳೆ. ಈ ಬಗ್ಗೆ ಬೇರೆ ದಾಖಲೆ ಸಂಗ್ರಹಿಸಿಲ್ಲ

**41)** ದಿನಾಂಕ **22.03.2023** ರಂದು ನಾವು ಸುಮೋಟೋ ಕೊಲೆ ಪ್ರಕರಣವನ್ನು ದಾಖಲು ಮಾಡಿಕೊಂಡಿಲ್ಲ. ನಿಪಿ-**43** ರಲ್ಲಿ ಆಲ್ಕೋಹಾಲ್ ಇರುವ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-**46** ರಲ್ಲಿ ಆರ್ಟಿಕಲ್ **16, 17** ಮತ್ತು **18** ರಲ್ಲಿ ಇತೈಲ್ ಆಲ್ಕೋಹಾಲ್ ಅಂಶ ರಕ್ತದಲ್ಲಿ ಇದ್ದ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-**46** ರಲ್ಲಿ ಹೇಳಿರುವ ಪ್ರಮಾಣದಲ್ಲಿ ರಕ್ತದಲ್ಲಿ ಆಲ್ಕೋಹಾಲ್ ಇದ್ದಲ್ಲಿ ಒಬ್ಬ ವ್ಯಕ್ತಿಯ ನಡವಳಿಕೆ ಹೇಗೆ ಇರುತ್ತದೆ ಎಂಬುದರ ಬಗ್ಗೆ ವೈದ್ಯರ ವರದಿ ಪಡೆದಿಲ್ಲ. ಮೃತ ಯಾವಾಗ ಮತ್ತು ಎಲ್ಲಿ ಮಧ್ಯ ಸೇವನೆ ಮಾಡಿದ್ದ ಎಂಬುದರ ಬಗ್ಗೆ ಅವಶ್ಯಕತೆ ಇಲ್ಲದಿರುವ ಕಾರಣ ಮಾಹಿತಿ ಪಡೆದಿಲ್ಲ.

**42)** ಆರೋಪಿಯ ಸ್ವ ಖುಷಿಹೇಳಿಕೆಯಲ್ಲಿ ಮಧ್ಯ ಸೇವಿನ ಮಾಡಿದ್ದ ಬಗ್ಗೆ ಹೇಳಿಲ್ಲ ಎಂದರೆ ಸರಿ. ಮೃತ ಜಾಫರ್ ಮನೆ ನಂಬರ್ **11**, ಬ್ಲಾಕ್-ಜಿ ನಲ್ಲಿ ವಾಸವಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ನಿಪಿ-**52** ದಾಖಲೆ ಇದೆ ಎಂದು ಹೇಳಿರುತ್ತಾರೆ. ಡಿ.ಎ.ಆರ್ ಡಿ.ವೈ.ಎಸ್.ಪಿ ಅವರ ಹೇಳಿಕೆಯನ್ನು ಮೃತನು ಘಟನೆಯ ಸಮಯದಲ್ಲಿ ಅಲ್ಲಿ ವಾಸವಿದ್ದ ಬಗ್ಗೆ ಪಡೆದುಕೊಂಡಿಲ್ಲ. ಸಾಕ್ಷಿಯ ಸದರಿ ಬ್ಲಾಕ್ ನ ಮನೆ ನಂಬರ್ **11** ಆತನಿಗೆ ಹಂಚಿಕೆ ಮಾಡಿದ್ದ ಬಗ್ಗೆ ದಾಖಲೆ ಕೊಟ್ಟಿದ್ದಾಗಿ ಸಾಕ್ಷಿ ಹೇಳುತ್ತಾರೆ. ಸದರಿ ಮನೆಯನ್ನು ಆತ ಪಡೆದ ಬಗ್ಗೆ ಲಿಖಿತವಾದ ಬೇರೆ ದಾಖಲೆ ಇಲ್ಲ. ಮೃತನು ಸದರಿ ಮನೆಯ ಕರೆಂಟ್ ಬಿಲ್ ಮತ್ತು ನೀರಿನ ಬಿಲ್ ಕಟ್ಟಿದ್ದ ಬಗ್ಗೆ ದಾಖಲೆ ಪಡೆದಿಲ್ಲ. ಜಿ ಬ್ಲಾಕ್ ನಲ್ಲಿ **6** ಮನೆಗಳು ಇವೆ. **11** ನೇ ಮನೆಯ ಅಕ್ಕಪಕ್ಕದಲ್ಲಿ ಇರುವ ಮನೆಗಳ ನಂಬರ್ ಗೊತ್ತಿಲ್ಲ. ಜಿ ಬ್ಲಾಕ್ ನಲ್ಲಿ ಈಶ್ವರ ಕುಮಾರ್ ಎ.ಪಿ.ಸಿ **124**, ಸಿ ಹನುಮರೆಡ್ಡಿ ಕಾಮರೆಡ್ಡಿ ಎ.ಎಫ.ಸಿ **93**, ವೆಂಕಟೇಶ ಸಿ.ಎಚ್.ಸಿ **451** ರವರು ವಾಸವಿದ್ದರು ಎಂದರೆ ಸರಿ. ಸದರಿಯವರುಗಳ ಮತ್ತು ಅವರ ಕುಟುಂಬದವರ ಹೇಳಿಕೆಗಳನ್ನು ನಾನು ಪಡೆದಿಲ್ಲ.

**43)** ಆರೋಪಿಯ ಚಪ್ಪಲಿ ಅಲ್ಲಿ ಇದ್ದ ಬಗ್ಗೆ ನಾನು ಜಪ್ತು ಮಾಡಿದ ಚಪ್ಪಲಿಯನ್ನು ಮತ್ತು ಆರೋಪಿಯ ಕಾಲಿನ ಅಳತೆಯನ್ನು ತಜ್ಞರಿಗೆ ಕಳುಹಿಸಿ ಖಾತ್ರಿಪಡಿಸಿಕೊಂಡಿಲ್ಲ. ಚಾಸಾ-**10, 12, 13, 14** ಮತ್ತು ಅಸಾ-**5** ಮೃತನ ಮನೆಯ ಅಕ್ಕಪಕ್ಕದಲ್ಲಿ ವಾಸವಿದ್ದ ಬಗ್ಗೆ ಅವರಿಂದ ಹೇಳಿಕೆ ಪಡೆದಿದ್ದೇನೆ. ಆದರೆ ಅವರಿಂದ ದಾಖಲೆ ಪಡೆದುಕೊಂಡಿಲ್ಲ. ಆರೋಪಿಯ ಮಗನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಸಾಕ್ಷಿಯು ಮಗು ಆ ಸಮಯದಲ್ಲಿ **7** ವರ್ಷದವನಾಗಿದ್ದರಿಂದ ಮತ್ತು ಘಟನೆ ಸಮಯದಲ್ಲಿ ಅದು ಮಲಗಿಕೊಂಡಿತ್ತು ಎಂದು ಆರೋಪಿ ಹೇಳಿದ್ದರಿಂದ ಮಗುವಿನ ವಿಚಾರಣೆ ಮಾಡಿಲ್ಲ ಎಂದು ಹೇಳಿರುತ್ತಾರೆ.

**44)** ಚಾಸಾ-**12** ರಿಂದ **17** ರವರು ತಮ್ಮ ಹೇಳಿಕೆಯಲ್ಲಿ ಆರೋಪಿಯ ಜೊತೆ ಘಟನೆ ಸಮಯದಲ್ಲಿ ಮಗು ಇದ್ದ ಬಗ್ಗೆ ಹೇಳಿಲ್ಲ. ಪ್ರತ್ಯಕ್ಷ ಸಾಕ್ಷಿದಾರರಿಂದ ಆರೋಪಿಯ ಗುರುತು ಕವಾಯಿತನ್ನು ಮಾಡಿಸಿಲ್ಲ. ಪ್ರತ್ಯಕ್ಷ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿ ನಾನು ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ಆಂಬ್ಯೂಲೆನ್ಸ ಚಾಲಕನನ್ನು ನಾನು ವಿಚಾರಣೆ ಮಾಡಿಲ್ಲ.

45) ತನಿಖೆ ಮಾಡುವುದಕ್ಕಾಗಿ ಸರ್ಕಾರದಿಂದ ಒಂದು ಕಿಟ್ ಕೊಡುತ್ತಾರೆ ಎಂದರೆ ಸರಿ. ತನಿಖಾ ಕಿಟ್ ನಲ್ಲಿ ವಿಡಿಯೋ ತೆಗೆಯುವ ಸಾಧನ ಇರುತ್ತದೆ ಎಂದರೆ ಸರಿಯಲ್ಲ. ವಿಡಿಯೋ ಕ್ಯಾಮೇರಾವನ್ನು ಪ್ರತ್ಯೇಕವಾಗಿ ಠಾಣೆಗೆ ಕೊಟ್ಟಿರುತ್ತಾರೆ. ನಮ್ಮ ಠಾಣೆಗೆ ಕೊಟ್ಟ ವಿಡಿಯೋ ಕ್ಯಾಮೆರಾ ಸುಸ್ಥಿತಿಯಲ್ಲಿ ಇಲ್ಲದೇ ಇರುವ ಕಾರಣ ಮೊಬೈಲನಿಂದ ವಿಡಿಯೋ ಮಾಡಿಕೊಂಡಿದ್ದೆ ಎಂದು ನನ್ನ ಮೇಲಾಧಿಕಾರಿಗಳಿಗೆ ವರದಿ ಕೊಟ್ಟಿಲ್ಲ. ಚಾಸಾ-36 ರವರ ಮೊಬೈಲನ್ನು ನಾನು ಜಪ್ತು ಮಾಡಿಕೊಂಡಿಲ್ಲ. ಆತನ ಮೊಬೈಲನ ಮೆಮೊರಿ ಚಿಪ್ ಅನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡಿಲ್ಲ. ಗಣಕಯಂತ್ರದಲ್ಲಿ ಸಿಡಿ ಬರ್ನ ಮಾಡಿದ ಬಗ್ಗೆ ಚಾಸಾ-36 ರವರು ತಮ್ಮ ವರದಿಯಲ್ಲಿ ಹೇಳಿದ್ದಾರೆ.

46) ಭಾವಚಿತ್ರಗಳನ್ನು ನಾನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿದ್ದೇನೆಎಂದರೆ ಸರಿಯಲ್ಲ. ಅವುಗಳಲ್ಲಿ ಯಾವುದೇ ನೈಜತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಯಾವುದೇ ಸ್ವ ಖುಷಿ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅದನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-44 ರಲ್ಲಿ ಹಾರೆಯ ಉದ್ದ 84 ಸೆಂ.ಮೀ ಎಂದು ತೋರಿಸಲಾಗಿದೆ ಎಂದರೆ ಸರಿ. ಮತ್ತು ಸುತ್ತಳತೆ 13 ಸೆಂ.ಮೀ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-30 ರಲ್ಲಿ ಹಾರೆಯ ಉದ್ದ 18 ಇಂಚು ಎಂದು ಮತ್ತು ಸುತ್ತಳತೆಯನ್ನು 5 ಇಂಚು ಎಂದು ನಮೂದಿಸಲಾಗಿದೆ ಎಂದರೆ ಸರಿ. 84 ಸೆಂ.ಮೀ ಎಂದರೆ 33.07 ಇಂಚು ಆಗುತ್ತದೆ ಎಂದರೆ ಸರಿ. 13 ಸೆಂ.ಮೀ ಎಂದರೆ 5.12 ಇಂಚು ಆಗುತ್ತದೆ ಎಂದರೆ ಸರಿ. ನಿಪಿ- 30 ರಲ್ಲಿ ನಮೂದು ಮಾಡಿರುವ ಹಾರೆ ಹಾಗು ನಿಪಿ- 44 ರಲ್ಲಿ ನಮೂದು ಮಾಡಿರುವ ಹಾರೆಗಳು ಬೇರೆ ಬೇರೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೋಸ್ಕರ ಸದರಿ ಹಾರೆಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

47) ಮೃತ ರಕ್ತದ ಮಾದರಿಯನ್ನು ಸಂಗ್ರಹಿಸಿ ಅದರ ಬ್ಲಡ್ ಗ್ರುಪ್ ತಿಳಿಯಲು ಎಫ್.ಎಸ್.ಎಲ್ ಗೆ ಕಳುಹಿಸಿಕೊಟ್ಟಿಲ್ಲ. ನಾನು ಜಪ್ತು ಮಾಡಿಕೊಂಡ ನೈಟಿಯ ಉದ್ದಗಲ ಅಳತೆಯನ್ನು ನಾನು ಪಂಚನಾಮೆಯಲ್ಲಿ ನಮೂದಿಸಿಲ್ಲ. ನಾನು ವಶಪಡಿಕೊಂಡಿದ್ದೇನೆ ಎಂದು ಹೇಳಿದಂತಹ ಕರಿ ಮಣಿ ಸರ, ನೈಟಿ ಮತ್ತು ಚಪ್ಪಲಿ ಆರೋಪಿಗೆ ಸಂಬಂಧ ಪಟ್ಟಿಲ್ಲ

ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಸರಿಯಲ್ಲ.

48) ಎಫ್.ಐ.ಆರ್ ಕಲಂ 3ರಲ್ಲಿ ಮನೆಯಲ್ಲಿ ಚರ್ಚಿಸಿ ದೂರು ಕೊಟ್ಟ ಬಗ್ಗೆ ನಮೂದಿದೆ ಎಂದರೆ ಸರಿ. ಮೃತ ಜಾಫರ್ ಸಾಬ ಮತ್ತು ಆತನ ಹೆಂಡತಿ ನವೀನ್ ತಾಜ್ ನಡುವೆ ಸಾಮರಸ್ಯದ ಜೀವನ ಇರಲಿಲ್ಲ ಎಂದರೆ ಸಾಕ್ಷಿಯು ಅವರುಗಳ ನಡುವೆ ಕೇಸುಗಳು ಇದ್ದವು ಎಂದು ಹೇಳಿರುತ್ತಾರೆ. ಅವರಿಬ್ಬರು ಒಂದೇ ಕಡೆ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯದ್ದು ಚಿನ್ನಾಪುರ ಗ್ರಾಮ ಎಂದರೆ ಸರಿ. ಮೃತನ ಹೆಂಡತಿ ಮತ್ತು ಅವಳ ಸಂಬಂಧಿಕರು ಮಾಡಿಸಿದ ಅಪರಾಧವನ್ನು ಮುಚ್ಚಿ ಹಾಕುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯು ಆ ದಿವಸ ನಾನು ಹೇಳಿದಂತೆ ಡಿ.ಎ.ಆರ್ ವಸತಿ ಗೃಹದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಜಿ-11 ವಸತಿ ಗೃಹದಲ್ಲಿ ಮೃತನು ವಾಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಸತಿ ಗೃಹದಲ್ಲಿ ಯಾರೋ ಹಿಂದು ಒಬ್ಬ ವಾಸವಿದ್ದ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪಿರ್ಯಾದುದಾರಿರಿಗೆ ಸಹಾಯ ಮಾಡುವ ಉದ್ದೇಶದಿಂದ ಎಲ್ಲಾ ಸಾಕ್ಷಿದಾರರನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗಳನ್ನು, ಫೊಟೋಗಳನ್ನು ಮತ್ತು ವಿಡಿಯೋಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರ ಮಾತನ್ನು ಕೇಳಿಕೊಂಡು ಮತ್ತು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಪ್ರಕರಣಕ್ಕೆ ಸಂಬಂಧ ಇಲ್ಲದ ಆರೋಪಿಯನ್ನು ಪ್ರಕರಣದಲ್ಲಿ ಸೇರಿಸಿ ಅವಳ ವಿರುದ್ದ ಸುಳ್ಳು ದೋಷಾರೋಪಣ ಪತ್ರ ವನ್ನು ಸಲ್ಲಿಸಿದ್ದೇನೆಎಂದರೆ ಸರಿಯಲ್ಲ.

49) ಆರೋಪಿ ಮೃತನಿಗೆ ಹೊಡೆದಿರುವುದನ್ನು ಯಾರು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಆರೋಪಿಗು ಮತ್ತು ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದೇ ಇದ್ದರು ಸಹ ನಾನು ಅವಳ ವಿರುದ್ದ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ಯಾರಾ ನಂಬರ್ 31 ರಲ್ಲಿ ಹೇಳಿರುವ ಪ್ರಕರಣಗಳು ನವೀನ್

ತಾಜ್ ಮತ್ತು ಮೃತನ ನಡುವೆ ಇದ್ದ ಪ್ರಕರಣಗಳಾಗಿವೆ ಎಂದರೆ ಸರಿ. ಸಾಕ್ಷಿಯು ಬೆರಳಚ್ಚು ತಪ್ಪಿನಿಂದ ಹನುಮಕ್ಕ ಎಂದು ನಮುದಿಸಲಾಗಿದೆ ಎಂದು ಹೇಳಿರುತ್ತಾರೆ. **2016** ರಿಂದ ಮೃತನು ಮರಣ ಹೊಂದುವವರೆಗು ಮೃತ ಹಾಗು ನವೀನ್ ತಾಜ್ ನಡುವೆ ವ್ಯಾಜ್ಯಗಳು ಇದ್ದವು ಎಂದರೆ ಸರಿ. ದಿಃ **22.03.2023** ರಾತ್ರಿ **08.30** ಕ್ಕೆ ಮೃತನ ಜೊತೆ ಯಾರು ಜಗಳ ಆಡುತ್ತಿದ್ದರು ಎಂಬುದರ ಬಗ್ಗೆ ಯಾವುದೇ ಸಾಕ್ಷಿದಾರರು ಗಲಾಟೆಯನ್ನು ಮನೆಯ ಒಳಗೆ ಹೋಗಿ ನೋಡಿದ್ದ ಬಗ್ಗೆ ಹೇಳಿಲ್ಲ ಎಂದರೆ ಸರಿ.

**50)** ಪಿರ್ಯಾದುದಾರರಿಗೆ ಸಹಾಯ ಮಾಡುವ ಸಲುವಾಗಿ ಮತ್ತು ಅವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ನಾನು ಎಲ್ಲಾ ದಾಖಲಾತಿಗಳನ್ನು ಸುಳ್ಳು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಯಾವುದೇ ವಸ್ತುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.